ಶ್ರೀ ಜಿ. ರಾಮೇಗೌಡ.—ಸ್ವಾಮಿ, ಈ ಸಂಖ್ಯೆಯ ವಿಚಾರವಾಗಿ ಹೇಳುವುದಾದರೆ, ಇದು ಆಹುದಾದರೆ ಆಹುದೆನ್ನಿ, ಇಲ್ಲವಾದರೆ ಇಲ್ಲವೆನ್ನಿ, ಆದರೆ ಬಹು ಜನರು ಹೇಳುವ ಮಾತು ಇದು. ಆದರಂತೆ ನಾನು ಹೇಳಿಕೆ ಕೊಟ್ಟಿದ್ದೇನೆ. ಅಧಿಕಾರಿಗಳನ್ನು ಕಳಿಸಿದ್ದೇನೆ. ನಿಜಾಂಶವನ್ನು ಜಾಗ್ರತೆಯಾಗಿ ತಿಳಿದು ಅಲ್ಪೇನಾದರೂ ಕಾಡುಪ್ರಾಣಿಯಿದ್ದರೆ ತಕ್ಕ ಬಂದೋಬಸ್ತನ್ನು ಮಾಡುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡುತ್ತೇನೆ.

ಶ್ರೀ ಬೆಟ್ಟಸ್ವಾಮಿಗೌಡ.—ಸ್ವಾಮಿ, ಈಗ ಈ ನಷ್ಟ ಅನುಭವಿಸಿರತಕ್ಕ ಸುತ್ತಮುತ್ತಲಿನ ಗ್ರಾಮದವರಿಗೆ ಸೂಕ್ತವಾದ ಪರಿಹಾರವನ್ನು ಕೊಡುವುದಾಗಿ ಈಗತಾನೇ ಹೇಳಿಕೆಯಲ್ಲಿ ಹೇಳಿದ್ದೀರಿ. ಆದರೆ ಅದನ್ನು ಯಾವಾಗ ಕೊಡುತ್ತಾರೆ, ಎಷ್ಟು ಕೊಡುತ್ತಾರೆ, ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಜಿ. ರಾಮೇಗೌಡ.—ಇದರ ಬಗ್ಗೆ ಇದುವರೆಗೂ ಒಂದು ಅರ್ಜಿಯೂ ಬಂದಿಲ್ಲ. ಅರ್ಜಿಗಳು ಬಂದಕೂಡಲೇ ಸತ್ತಿರುವ ದನಗಳ ಬೆಲೆಯುಮೇಲೆ ಪರಿಹಾರವನ್ನು ಕೊಡುವ ಏರ್ಪಾಡು ಮಾಡಲಾಗುವುದು. ಡಿ.ಎಫ್.ಓ. ಅವರಿಗೆ ೨೫೦ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ಗೆ ೫೦೦ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ಗೆ ೧ ಸಾವಿರ ರೂಪಾಯಿಗಳವರೆಗೆ ಸ್ಯಾಂಕ್ಷನ್ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದೇವೆ. ನಷ್ಟ ಯಾವರೀತಿಯಾಗಿದೆ ಎಂಬುದನ್ನು ಪರೀಕ್ಷೆ ಮಾಡಿ ಪಾವತಿ ಮಾಡುವ ಕೆಲಸವನ್ನು ಅವರು ಮಾಡುತ್ತಾರೆ. ಅದರ ಪ್ರಕಾರ ತನಿಖೆ ಮಾಡಿ ಯಾವ ಯಾವ ಅರ್ಜಿ ಬರುತ್ತದೋ ಅದರ ಬಗ್ಗೆ ತಡವಿಲ್ಲದೇ ತಕ್ಷಣ ಪರಿಹಾರ ನೀಡುವಂತೆ ಏರ್ಪಾಡು ಮಾಡುತ್ತೇನೆ.

Re :—Allotment of land reserved for playground to Private Management.

ಶ್ರೀ ಎಂ. ಚಂದ್ರಶೇಖರ್.—ಜಮೀನು ಅಲಾಟ್ ಆಗಿರುವುದನ್ನು ಕ್ಯಾನ್ಸಲ್ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟರೆ ಸಾಕು.

ಅಧ್ಯಕ್ಷರು.—ಇದು ಪೌರಾಡಳಿತ ಸಚಿವರಿಗೆ ಸಂಬಂಧಪಟ್ಟಿದ್ದು. ಅವರು ಈಗ ಇಲ್ಲ.

ಶ್ರೀ ಎಂ. ಚಂದ್ರಶೇಖರ್. —ಮಾನ್ಯಮಂತ್ರಿಗಳೇ ಆಶ್ವಾಸನೆ ಕೊಟ್ಟರೆ ಸಾಕು.

SRI D. DEVARAJ URS.—Unless I know whether it is illegal or whether is unnecessary interference, how can I give a promise?

MR. SPEAKER.—I withhold it.

SRI D. DEVARAJ URS.—Let him write to me what exactly is the position and I shall look into it.

10-30 A. M.

(*iii*) *re: arrest of workers of Mysore metal and wire factory Bangalore*

SRI B. V. KAKKILAYA (Vittal).—I call the attention of the Chief Minister to the arrest of 50 workers of Mysore Metal and Wire Factory, Bangalore.

SRI D. DEVARAJ URS (Chief Minister).—I wish to make the following Statement:

The Mysore Wire and Metal Industries Factory is located at Tumkur Road, Bangalore. The workers numbering about 80 are on strike since 30-7-78, following the termination of an employees by